## (ಖ) ಗಲಗಲಿ ಆರೋಗ್ಯ ಪ್ರಾಥಮಿಕ ಕೇಂದ್ರಕ್ಕೆ ವೈದ್ಯಾಧಿಕಾರಿಗಳನ್ನು ನೇಮಿಸುವುದು

ಶ್ರೀ ಬಾಬುರೆಡ್ಡಿ ವೆಂಕಪ್ಪ ತುಂಗಳ್.— ಮಾನ್ಯ ಅಧ್ಯಕ್ಷರೇ ನನ್ನ ಕ್ಷೇತ್ರದ ಗಲಗಲಿ ಗ್ರಾಮ ತಾಲ್ಲೂಕಿನಲ್ಲಿಯೇ ಅತ್ಯಂತ ದೊಡ್ಡ ಗ್ರಾಮ ಹಾಗೂ ವ್ಯಾಪಾರ ಕೇಂದ್ರವಾಗಿದೆ. ಸುಮಾರು ಹತ್ತು ಸಾವಿರ ಜನಸಂಖ್ಯೆ ಹೊಂದಿರುವ ಈ ಗ್ರಾಮದ ಸುತ್ತಲಿನ ಹತ್ತು ಕಿಲೋಮೀಟರ್ ವ್ಯಾಪಿಯಲ್ಲಿ ೧೫–೨೦ ಹಳ್ಳಿಗಳು ಬರುತ್ತಿದ್ದು ರೋಗಿಗಳ ಅನುಕೂಲಕ್ಕಾಗಿ ಇಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿರುತ್ತದೆ.

ಎಂಟು ತಿಂಗಳುಗಳ ಹಿಂದೆ ಅಲ್ಲಿದ್ದ ವೈದ್ಯ ದಂಪತಿಗಳನ್ನು ಅವಧಿಪೂರ್ವದಲ್ಲಿಯೇ ಅಲ್ಲಿಂದ ವರ್ಗಾಯಿಸಲಾಯಿತು ನಂತರ ಸುಮಾರು ಆರು ತಿಂಗಳುಗಳಿಂದಲೂ ಅಲ್ಲಿದ್ದ ಒಬ್ಬರೇ ಒಬ್ಬ ವೈದ್ಯಾಧಿಕಾರಿಗಳು ಆಸ್ಪತ್ರೆಯ ಕೆಲಸ ಕಾರ್ಯಗಳ ಜೊತೆಗೆ ಆಡಳಿತ ಕಾರ್ಯವನ್ನು ನೋಡಿಕೊಂಡರು. ಸುಮಾರು ಮೂರು ತಿಂಗಳ ಹಿಂದೆ ಅವರು ಕೂಡ ಎಂ. ಡಿ. ತರಬೇತಿಗೆ ಆಯ್ಕೆಯಾಗಿ ಅಧಿಕಾರವನ್ನು ಬೇಳಗಿಯ ವೈದ್ಯಾಧಿಕಾರಿಗಳಿಗೆ ಹಸಿಸಿಕೊಟ್ಟು ಹೋದರು.

ಆರೋಗ್ಯ ಇಲಾಖೆಯ ಮೇಲಾಧಿಕಾರಿಗಳು ಆರಂಭದಲ್ಲಿಯೇ ಏನಾದರೂ ವ್ಯವಸ್ಥೆ ಮಾಡ ಬೇಕಾಗಿತ್ತು ಆದರೆ ಮಾಡಲಿಲ್ಲ. ಕೊನೆಗೆ ನಾನು ದಿನಾಂಕ ೩೦–೧೦–೧೯೮೮ ರಂದು ಸ್ವತಃ ಮುಖ್ಯ ಮಂತ್ರಿಗಳನ್ನು ಕಂಡು ಅಲ್ಲಿ ಇಬ್ಬರು ವೈದ್ಯ ದಂಪತಿಗಳನ್ನು ವರ್ಗಾಯಿಸುವಂತೆ ಮನವಿ ಮಾಡಿಕೊಂಡೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಪತ್ರ ಸಿ.ಎಂ./ಸಿಪಿಟಿ/೩೬೦೩ ದಿನಾಂಕ ೪–೨–೧೯೮೮ ರಂದು ಒಂದು ಪತ್ರವನ್ನು ಬರೆದು ಆರೋಗ್ಯ ಇಲಾಖೆಯ ಕಾರ್ಯದರ್ಶಿಗಳ ಕಡೆಗೆ ಅದನ್ನು ಕಳುಹಿಸಿದರು. ಸ್ವತಃ ಮುಖ್ಯ ಮಂತ್ರಿಗಳೇ ಆರೋಗ್ಯ ಇಲಾಖೆಯ ಕಾರ್ಯದರ್ಶಿಗೆ ಆದೇಶ ಮಾಡಿರುವಾಗ ಕೆಲಸವಾಗಬಹುದೆಂದು ನಿರೀಕ್ಷಿಸಿ ನಾನು ಸುಮ್ಮನೇ ಕಂಳಿತೆ. ಈಗಲೂ ಅಂದರೆ ಇಂದಿನವರೆವಿಗೂ ಗಲಗಲಿಗೆ ವೈದ್ಯಾಧಿಕಾರಿಗಳು ಬಂದಿಲ್ಲ. ಈ ಮಧ್ಯೆ ೨–೩ ಸಲ ನಾನು ಈ ಬಗ್ಗೆ ವಿಚಾರಿಸಲಾಗಿ ಗಲಗಲಿಗೆ ವೈದ್ಯಾಧಿಕಾರಿಗಳನ್ನು ಸಾಮಾನ್ಯ ವರ್ಗಾವಣೆಯಲ್ಲಿ ಹಾಕುವುದಾಗಿ ಮೌಖಿಕವಾಗಿ ತಿಳಿಸಲಾಯಿತು. ವೈದ್ಯಕೀಯ ಸೌಲಭ್ಯಗಳಿಲ್ಲದೆ ಗಲಗಲಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದ ರೋಗಿಗಳು ಅತ್ಯಂತ ತೀವ್ರ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಕಳೆದ ೩ ತಿಂಗಳಿಂದ ಒಂದು ದೊಡ್ಡ ಗ್ರಾಮಾಂತರ ಪ್ರದೇಶದ ಆಸ್ಪತ್ರೆಯಲ್ಲಿ ಒಬ್ಬರೂ ವೈದ್ಯರಿಲ್ಲವೆಂದ ಮೇಲೆ ಅಲ್ಲಿಯ ಸ್ಥಿತಿ ಹೇಗಿರಬೇಕು ? ಸರಗಂತೂ ಗಲಗಲಿ ಗ್ರಾಮಕ್ಕೆ ಹೋಗದಂತಾಗಿದೆ. ಈ ಸ್ಥಿತಿಯಲ್ಲಿ ಹಳ್ಳಿಗರನ್ನು ಎದುರು ಹಾಕಿಕೊಂಡು ಶಾಸಕರು ಕೆಲಸ ಮಾಡುವುದಾದರೂ ಹೇಗೆ ? ಕಾರಣ ಈಗಲಾದರೂ ಸನ್ಮಾನ್ಯ ಆರೋಗ್ಯ ಸಚಿವರು ಇತ್ತ ಕಡೆ ಗಮನಹರಿಸಿ ನಾನು ಸೂಚಿಸಿದ ಮತ್ತು ಮುಖ್ಯ ಮಂತ್ರಿಗಳು ಆದೇಶ ನೀಡಿದ ವೈದ್ಯ ದಂಪತಿಗಳನ್ನು ಗಲಗಲಿಗೆ ಈ ಕೂಡಲೇ ವರ್ಗಾಯಿಸುವ ಕ್ರಮ ಕೈಗೊಂಡು ನನ್ನ ಧೈರ್ಯವನ್ನು ಉಳಿಸಬೇಕೆಂದು ತಮ್ಮ ಮುಖಾಂತರ ಸನ್ಮಾನ್ಯ ಆರೋಗ್ಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.— ಮಾನ್ಯ ಅಧ್ಯಕ್ಷರೇ, ಇದಕ್ಕೆ ಮಾನ್ಯ ಆರೋಗ್ಯ ಸಚಿವರ ಕಡೆಯಿಂದ ಉತ್ತರ ತರಿಸಿ ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ.

## (೬) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಂ ಕಟ್ಟಿಸಿರುವ ಹೆಚ್. ಐ. ಜಿ. ಎಂ. ಐ. ಜಿ. ಮತ್ತು ಎಲ್. ಐ. ಜಿ. ಮನೆಗಳ ಬಗ್ಗೆ

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬೆಂಗಳೂರಿನ ನಗರದ ಬೇರೆ ಬೇರೆ ಬಡಾವಣೆಗಳಲ್ಲಿ ಹೆಚ್.ಐ.ಜಿ. (ಹೈಯರ್ ಇನ್‌ಕಂ ಗ್ರೂಪ್) ಎಂ.ಐ.ಜಿ. (ಮಧ್ಯಮ ಆದಾಯದ ಗುಂಪು) ಮತ್ತು ಎಲ್.ಐ.ಜಿ. (ಕಡಿಮೆ ಆದಾಯದ ಗುಂಪು)ನಲ್ಲಿ ಎಷ್ಟೆಷ್ಟು ಮನೆಗಳನ್ನು ಕಟ್ಟಿಸಿರುತ್ತಾರೆ ಗ್ರೂಪ್‌ವಾರು ತಿಳಿಸುವುದು. ಗ್ರೂಪ್‌ವಾರು ಮನೆಗಳ ಖರೀದಿ ಮೊತ್ತವೆಷ್ಟು, ಪ್ರತ್ಯೇಕ, ಪ್ರತ್ಯೇಕವಾಗಿ ತಿಳಿಸುವುದು. ಹೀಗೆ ಖರೀದಿಸಿದ ಮನೆಗಳಲ್ಲಿ ಎಷ್ಟು ಮನೆಗಳು ಖಾಲಿಯಿವೆ. ಗ್ರೂಪ್‌ವಾರು ತಿಳಿಸುವುದು. ವಿತರಣೆಯಾಗದ